**ಸಾಕ್ಷಿಯನ್ನು ದಿಃ26.11.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಾನು ಹುಣಸೂರಿನಲ್ಲಿ ಮದುವೆಯಾದಾಗನಿಂದ ವಾಸವಿದ್ದೇನೆ. ನಾನು ಮದುವೆಯಾಗಿ 25 ವರ್ಷ ಆಗಿದೆ.

2. ಈ ದಾವೆಯನ್ನು ರತ್ನಮ್ಮ ಮತ್ತು ರಮೇಶ ರವರ ಮೇಲೆ ಹಾಕಿದ್ದೇನೆ. ದಾವಾ ಸರ್ವೆ ನಂಬರ್ ಕಂಪಲಾಪುರದ ಸ.ನಂ.401/5 ರಲ್ಲಿ 25 ಗುಂಟೆ.

3. ಪೂರ್ವಕ್ಕೆಃ ಚಿಲ್ಲುಂದ ಗಡಿ, ಪಶ್ಚಿಮಕ್ಕೆಃ ಲಕ್ಷ್ಮಮ್ಮ, ಉತ್ತರಕ್ಕೆಃ ರಮೇಶ, ದಕ್ಷಿಣಕ್ಕೆಃ ರಮೇಶ ರವರ ಜಮೀನು.

4. ರಮೇಶ ರವರಿಗೆ ಹೇಗೆ ಜಮೀನು ಬಂದಿತು ಎಂದರೆ ನನಗೆ ಗೊತ್ತಿಲ್ಲ.

5. ವಾದಪತ್ರದಲ್ಲಿ ಬರೆದ ವಿಚಾರಗಳನ್ನು ನಾನು ತಿಳಿದುಕೊಂಡಿದ್ದೇನೆ. ನಾವು ಹೇಳಿದಂತೆ ಬರೆಯಲಾಗಿದೆ.

6. ಚನ್ನಪ್ಪ ಎಂದರೆ ನನ್ನ ತಂದೆ, ಅವರ ತಮ್ಮನ ಹೆಸರು ನಟೇಶ. ಅವರಿಬ್ಬರೂ ಸೇರಿ ಜಮೀನು ಮಾರಾಟ ಮಾಡಿರುವ ಸರ್ವೇ ನಂಬರ್ ಏನು ಎಂದರೆ ನನಗೆ ಗೊತ್ತಿಲ್ಲ.

7. ಚನ್ನಪ್ಪ ಹಾಗೂ ನಟೇಶ ರವರು ಸ.ನಂ.401/3 ಎ ಹಾಗೂ 401/3 ಬಿ ರಲ್ಲಿ ಒಟ್ಟು 1 ಎಕರೆ 11 ಗುಂಟೆಯನ್ನು ದಿಃ 28.10.1987 ರಲ್ಲಿ 1 ನೇ ಪ್ರತಿವಾದಿಗೆ ಮಾರಾಟ ಮಾಡಿರುದು ಗೊತ್ತಾ ಎಂದರೆ ಗೊತ್ತು. ಸದರಿ ಜಮೀನಿನಲ್ಲಿ 1 ನೇ ಪ್ರತಿವಾದಿಯೇ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿ. ಸದರಿ ಜಮೀನಿನಲ್ಲಿ ನಿಮಗೆ ಹಕ್ಕು ಮತ್ತು ಸ್ವಾಧೀನ ಇಲ್ಲ ಎಂದರೆ ಸರಿ.

8. ಪೂರ್ವಕ್ಕೆಃ ವೀರಭದ್ರಶೆಟ್ಟಿ ರವರ ಜಮೀನು, ಪಶ್ಚಿಮಕ್ಕೆಃ ಚನ್ನಪ್ಪ ಬಿನ್ ಲೇಟ್ ಸಿದ್ದಪ್ಪ ರವರ ಜಮೀನು, ಉತ್ತರಕ್ಕೆಃ ಜವರಪ್ಪ ನವರ ಜಮೀನು, ದಕ್ಷಿಣಕ್ಕೆಃ ರಮೇಶ ರವರ ಜಮೀನು, ಸದರಿ ಚಕ್ಕುಬಂದಿಯಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

9. ಅವರು ಮಾರಾಟ ಮಾಡಿರುವ ಚಕ್ಕುಬಂದಿ, ಪೂರ್ವಕ್ಕೆಃ ಲಕ್ಷ್ಮಮ್ಮ ರವರ ಜಮೀನು, ಪಶ್ಚಿಮಕ್ಕೆಃ ವೆಂಕಟಯ್ಯ ರವರ ಜಮೀನು, ಉತ್ತರಕ್ಕೆಃ ಲಕ್ಷ್ಮಮ್ಮ ರವರ ಜಮೀನು, ದಕ್ಷಿಣಕ್ಕೆಃ ರಮೇಶ ರವರ ಜಮೀನು. ಸದರಿ ಚಕ್ಕುಬಂದಿಯಲ್ಲಿ ಮಾರಾಟ ಮಾಡಿಲ್ಲ, ಮೇಲೆ ಹೇಳಿದ ಚಕ್ಕುಬಂದಿಯಲ್ಲಿ ಮಾರಾಟ ಮಾಡಿರುವುದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

10. ಕ್ರಯಪತ್ರದಲ್ಲಿ ಬರೆದಿರುವ ಚಕ್ಕುಬಂದಿಯಲ್ಲಿ ಅವರು ಸ್ವಾಧೀನದಲ್ಲಿದ್ದು, ಬೇಲಿ ಹಾಕಿಕೊಂಡು ತೋಟ ಮಾಡಿಕೊಂಡಿದ್ದಾರೆ ಎಂದರೆ, ಸರಿಯಲ್ಲ, ಅದು ಖಾಲಿ ಇದೆ, ಬೇಲಿ ಹಾಕಿಲ್ಲ. ಅವರು ತೋಟ ಮಾಡಿಕೊಂಡು ಅನುಭವದಲ್ಲಿದ್ದರೂ ಸಹ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

11. ನೀವು 25 ವರ್ಷದ ಹಿಂದೆ ಮದುವೆ ಆಗಿದ್ದರಿಂದ ನಿಮಗೆ ದಾವಾ ಸ್ವತಿನ ಬಗ್ಗೆ ಗೊತ್ತಿಲ್ಲ ಎಂದರೆ ಸರಿಯಲ್ಲ, ನಾನು ಪ್ರತಿದಿನ ಬಂದು ನನ್ನ ತಂದೆ ತಾಯಿ ನೋಡಿಕೊಳ್ಳುತ್ತೇನೆ ಎಂದು ನುಡಿಯುತ್ತಾರೆ.

12. ನೀವು ಮದುವೆ ಆದಾಗಿನಿಂದಲೂ ದಾವಾ ಸ್ವತ್ತು ಇರುವ ಕಡೆ ಬಂದಿಲ್ಲ ಅದನ್ನು ನೋಡಿಲ್ಲ ಎಂದರೆ ಸರಿಯಲ್ಲ.

13. ದಾವಾ ಸ್ವತ್ತಿನ ಚಕ್ಕುಬಂದಿಗೆ ಸಂಬಂಧಪಟ್ಟ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ, ಕೊಟ್ಟಿದ್ದೇವೆ.

14. ದಾವಾ ಸ್ವತ್ತನ್ನು ಸರ್ವೇ ಮಾಡಿಸಿದ್ದೇವೆ. ಆ ಬಗ್ಗೆ ದಾಖಲೆ ನೀಡಿದ್ದೇವೆ. ಆ ರೀತಿ ಯಾವುದೇ ದಾಖಲೆ ನೀಡದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

15. ಸ.ನಂ.401/5 ರ ಜಮೀನು ಕಂಪಲಾಪುರದಲ್ಲಿ ನೀವು ಹೇಳುವ ಚಕ್ಕುಬಂದಿಯಲ್ಲಿ ಇಲ್ಲ ಎಂದರೆ ಸರಿಯಲ್ಲ.

16. ನೀವು ನೀಡಿರುವ ಚಕ್ಕುಬಂದಿ ನಿಮ್ಮ ತಂದೆ ಮಾರಾಟ ಮಾಡಿರುವ ಜಮೀನಿನ ಚಕ್ಕುಬಂದಿ ಎಂದರೆ ಸರಿಯಲ್ಲ. ಸದರಿ ವಿಚಾರ ನಿಮಗೆ ಗೊತ್ತಿದ್ದರೂ ಸಹ ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

17. ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಹಾಜರುಪಡಿಸಿದ್ದೀರಾ ಎಂದರೆ ಸರಿಯಲ್ಲ.

18. ನಿಮ್ಮ ತಂದೆ ಹಾಗೂ ಚಿಕ್ಕಪ್ಪ ಮಾರಾಟ ಮಾಡಿರುವ ಜಮೀನು ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಸ್ವತ್ತಲ್ಲಿ ಎಂದೂ ಸಹ ನೀವು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

19. ಪ್ರತಿವಾದಿಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ತೊಂದರೆ ಕೊಟ್ಟಿದ್ದರಾ ಎಂದರೆ, ಕೊಟ್ಟಿದ್ದಾರೆ, ದೂರು ನೀಡಿದ್ದೀರಾ ಎಂದರೆ, ಪೊಲೀಸರು ನ್ಯಾಯಾಲಯಕ್ಕೆ ಹೋಗುವಂತೆ

ತಿಳಿಸಿರುತ್ತಾರೆ. ದೂರು ನೀಡಿದ ದಿನಾಂಕ ನನಗೆ ಗೊತ್ತಿಲ್ಲ. ನಮಗೆ ವ್ಯವಸಾಯ ಮಾಡಲು ತೊಂದರೆ ಕೊಟ್ಟಿರುತ್ತಾರೆ.

20. ನೀವು ಎಂದೂ ಸಹ ದಾವಾ ಜಮೀನಿನ ಬಳಿ ಹೋಗಿಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

21. ಪ್ರತಿವಾದಿಗಳು ತೊಂದರೆ ಕೊಟ್ಟಿದ್ದನ್ನು ನೋಡಿದವರು ಯಾರು ಇದ್ದಾರೆ ಎಂದರೆ, ನಮ್ಮ ತಮ್ಮ ಹಾಗೂ ತಂಗಿ ಇದ್ದರು. ಅಕ್ಕಪಕ್ಕದ ಜಮೀನವರು ಸಹ ನೋಡಿದ್ದಾರೆ. ಅವರ ಹೆಸರು ಏನು ಎಂದರೆ, ಸುಂದ್ರಣ್ಣ ಹಾಗೂ ನಾಗಣ್ಣ. ಸದರಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿಸಲು ತೊಂದರೆ ಇಲ್ಲ. ಸದರಿಯವರು ನಿಮ್ಮ ನೆಂಟರು ಎಂದರೆ ಸರಿಯಲ್ಲ, ದಾಯಾದಿಗಳು. ಅವರನ್ನು ಹೊರತುಪಡಿಸಿ ಬೇರೆ ಯಾರು ಸಾಕ್ಷಿ ಹೇಳುತ್ತಾರೆ ಎಂದರೆ, ಇಲ್ಲ.

22. ನಿಮ್ಮ ದಾಯಾದಿಗಳು ಹಾಗೂ ನೀವು ಸೇರಿಕೊಂಡು ಮಾರಾಟ ಮಾಡಿದ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

23. ನಿಪಿ - 1, 3, 6 ರಿಂದ 9 ರ ದಾಖಲೆಗಳನ್ನು ನೀವು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ.

24. ದಾವಾ ಸ್ವತ್ತು ಕಂಪಲಾಪುರ ಗ್ರಾಮದಲ್ಲಿ ಇಲ್ಲದೇ ಹೋದರು ಸಹ ನೀವು ಸುಳ್ಳು ದಾಖಲೆ ಸೃಷ್ಟಿ ಮಾಡಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ